# ಕರ್ನಾಟಕ ವಿಧಾನ ಪರಿಷತ್

ಸದಸ್ಯರ ಹೆಸರು : ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2050**

ಉತ್ತರಿಸಬೇಕಾದ ದಿನಾಂಕ : **27.03.2020**

ಉತ್ತರಿಸುವ ಸಚಿವರು : ಮಾನ್ಯ ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಹಾಲು ಮಹಾಮಂಡಲ ವತಿಯಿಂದ ಶೇಖರಿಸಲಾಗುತ್ತಿರುವ ಹಾಲಿನ ಪ್ರಮಾಣ ಎಷ್ಟು; (ಜಿಲ್ಲಾ ಹಾಲು ಮಹಾಮಂಡಲವಾರು ವಿವರಗಳನ್ನು ನೀಡುವುದು. | ಕರ್ನಾಟಕ ಹಾಲು ಮಹಾಮಂಡಳಿ ಅಧೀನದಲ್ಲಿರುವ 14 ಜಿಲ್ಲಾ ಹಾಲು ಒಕ್ಕೂಟಗಳಲ್ಲಿ ಫೆಬ್ರವರಿ–2020 ರ ಅಂತ್ಯಕ್ಕೆ ದಿನಂಪ್ರತಿ ಶೇಕಡವಾರು ಒಟ್ಟು 66.23 ಲಕ್ಷ ಕೆ.ಜಿ. ಹಾಲು ಶೇಖರಣೆಯಾಗುತ್ತಿದೆ. |

**ಜಿಲ್ಲಾ ಒಕ್ಕೂಟಗಳ ಹಾಲು ಶೇಖರಣೆ ವಿವರ**

| ಕ್ರ.ಸಂ. | ಒಕ್ಕೂಟ | ಹಾಲಿನ ಶೇಖರಣೆ ಲಕ್ಷ ಕೆ.ಜಿ.ಗಳಲ್ಲಿ |
|---|---|---|
| 1 | ಬೆಂಗಳೂರು | 13.99 |
| 2 | ಕೋಲಾರ | 7.77 |
| 3 | ಮೈಸೂರು | 4.70 |
| 4 | ಚಾಮರಾಜನಗರ | 1.88 |
| 5 | ಮಂಡ್ಯ | 6.80 |
| 6 | ತುಮಕೂರು | 6.20 |
| 7 | ಹಾಸನ | 8.10 |
| 8 | ಧಾರವಾಡ | 2.12 |
| 9 | ಬೆಳಗಾವಿ | 1.87 |
| 10 | ವಿಜಯಪುರ | 1.53 |
| 11 | ಕಲಬುರಗಿ | 5.29 |
| 12 | ದ.ಕನ್ನಡ | 4.24 |
| 13 | ಶಿವಮೊಗ್ಗ | 4.84 |
| 14 | ಬಳ್ಳಾರಿ | 1.66 |

| | | |
|---|---|---|
| ಆ | ರಾಜ್ಯ ಹಾಲು ಮಹಾಮಂಡಲ ವತಿಯಿಂದ ಇಡೀ ರಾಜ್ಯದ ಹಾಲು ಉತ್ಪಾದಕರಿಗೆ ಏಕ ರೀತಿಯ ಹಾಲು ಖರೀದಿ ದರವನ್ನು ನೀಡಲು ಇರುವ ತೊಂದರೆ ಏನು; | ಪ್ರತಿ ಒಕ್ಕೂಟವು ತನ್ನದೇ ಆದ ಕಾರ್ಯವ್ಯಾಪ್ತಿಯನ್ನು ಹೊಂದಿದ್ದು, ಪ್ರತ್ಯೇಕ ಉಪವಿಧಿ ಮತ್ತು ತನ್ನದೇ ಆದ ಚುನಾಯಿತ ಆಡಳಿತ ಮಂಡಳಿಯನ್ನು ಹೊಂದಿರುತ್ತದೆ. ಒಕ್ಕೂಟಗಳ ಹಾಲು ಶೇಖರಣೆ, ಮಾರಾಟ, ಖರ್ಚು–ವೆಚ್ಚಗಳು ಮುಂತಾದವುಗಳನ್ನು ಗಣನೆಗೆ ತೆಗೆದು ಕೊಂಡು ಕಾಲ–ಕಾಲಕ್ಕೆ ಹಾಲು ಒಕ್ಕೂಟಗಳೇ ಹಾಲು ಶೇಖರಣಾ ದರವನ್ನು ನಿರ್ಧರಿಸುವುದರಿಂದ ರಾಜ್ಯವ್ಯಾಪಿ ಒಂದೇ ದರ ನೀಡಲು ಬರುವುದಿಲ್ಲ. |
| ಇ | ರಾಜ್ಯ ಹಾಲು ಮಹಾಮಂಡಲಿಯು ರಾಜ್ಯದ ಹಾಲು ಉತ್ಪಾದಕರನ್ನು ಕಡೆಗಣಿಸಿರುವುದರಿಂದ ಖಾಸಗಿ ಡೈರಿಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ಹಾಲು ಮಹಾಮಂಡಳಿಯು ಹಾಲು ಶೇಖರಣೆ ಮಾಡುವುದರಲ್ಲಿ ರಾಷ್ಟ್ರದಲ್ಲಿ ದ್ವಿತೀಯ ಸ್ಥಾನದಲ್ಲಿದೆ.<br><br>ಹಾಲು ಶೇಖರಣೆಯಲ್ಲಿ ಖಾಸಗಿ ಡೈರಿಗಳ ಪಾಲು ಕೇವಲ ಶೇ.10–15 ಮಾತ್ರ ಇರುತ್ತದೆ. |
| ಈ | ಬಂದಿದ್ದಲ್ಲಿ, ಈ ಖಾಸಗಿ ಡೈರಿಗಳಿಗೆ ಕಡಿವಾಣ ಹಾಕಿ ರಾಜ್ಯದ ಹಾಲು ಉತ್ಪಾದಕರನ್ನು ಉತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸರ್ಕಾರದಿಂದ ಹಾಲು ಉತ್ಪಾದಕರಿಗೆ ಕ್ಷೀರಧಾರೆ ಯೋಜನೆಯಡಿ ಪ್ರತಿ ಲೀಟರ್ ಗುಣಮಟ್ಟದ ಹಾಲು ಸರಬರಾಜಿಗೆ ರೂ.5/– ಪ್ರೋತ್ಸಾಹಧನವನ್ನು ನೇರವಾಗಿ ಡಿ.ಬಿ.ಟಿ. ಕ್ಷೀರಸಿರಿ ತಂತ್ರಾಂಶದ ಮೂಲಕ ಬ್ಯಾಂಕ್ ಆಧಾರ್ ಜೋಡಣೆಯಾಗಿರುವ ಉಳಿತಾಯ ಖಾತೆಗಳಿಗೆ ಪಾವತಿ ಮಾಡಲಾಗುತ್ತಿದೆ.<br><br>ಹಾಲು ಉತ್ಪಾದಕರುಗಳು ಹೊಂದಿರುವ ರಾಸುಗಳಿಗೆ ವಿಮಾ ಸೌಲಭ್ಯವನ್ನು ಒದಗಿಸಲು ಯೋಜನೆಯನ್ನು ಒಕ್ಕೂಟಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದ ರಾಸುಗಳು ಅಕಾಲ ಮರಣ ಹೊಂದಿದಲ್ಲಿ ವಿಮಾ ಸಂಸ್ಥೆಯಿಂದ ಪರಿಹಾರ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಹಾಗೆಯೇ ಅನೇಕ ತಾಂತ್ರಿಕ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.<br><br>ಉತ್ಪಾದಕರಿಂದ ಖರೀದಿಸುವ ಹಾಲಿನ ದರವನ್ನು ಜೂನ್–2019 ರಿಂದ ಫೆಬ್ರವರಿ–2020ರ ಅಂತ್ಯಕ್ಕೆ ಒಕ್ಕೂಟಗಳಲ್ಲಿ 2 ರಿಂದ 3 ಬಾರಿ ಪರಿಷ್ಕರಿಸಲಾಗಿದೆ. |

**ಪಸಂಮೀ 140 ಸಲೆವಿ 2020**

(ಪ್ರಭು ಬಿ. ಚೌಹ್ವಾಣ್)
**ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು**